ಯೋಚಿಸುವುದೇ ಹೀಗಾ? ಸಹಾನುಭೂತಿಯ ಮಿತಿ ಯಾವುದು?

ನಿಕಿಟಾಳನ್ನು ಡಾ. ರಫೇಲಳ ಆಸ್ಪತ್ರೆಗೆ ಕಳಿಸಿದೆ.

★★★

ಇನ್ನು ಮೂರು ದಿನ ಬಿಟ್ಟು ಮತ್ತೆ ಕೆಲಸದಲ್ಲಿದ್ದಾಗ ಟೋನಿ ಎನ್ನುವ ನರ್ಸೊಬ್ಬ ಬಂದು, 'ಸೂರಿ, ನಿನ್ನ ಮುಂದಿನ ಕೇಸು ಎಸ್‌ಟೀಡೀ ಚೆಕ್. ತೊಡೆಸಂದಿಯಲ್ಲಿ ಹುಣ್ಣಾಗಿದೆಯಂತೆ. ತಮಾಷಿ ಎಂದರೆ ಈ ವ್ಯಕ್ತಿಯ ಹೆಸರು ಬಾಬ್ ಥಾಂಸನ್. ಕಂಪ್ಯೂಟರಲ್ಲೆಲ್ಲಾ ಈ ವ್ಯಕ್ತಿಯ ಲಿಂಗ ಹೆಣ್ಣು ಎಂದೇ ನಮೂದಿತವಾಗಿದೆ. ಆದರೆ ಈತನಿಗೆ ಗಡ್ಡ ಇದೆ, ಮೀಸೆ ಇದೆ. ನೀನು ರೂಮಿಗೆ ಹೋಗಿ ಪರೀಕ್ಷೆ ಮಾಡಬೇಕಾದರೆ ನಿನ್ನ ಸಹಾಯಕ್ಕೆ ಗಂಡು ನರ್ಸು ಬೇಕೋ, ಹೆಣ್ಣು ನರ್ಸು ಬೇಕೋ ಎಂದು ಹೇಳು' ಎಂದ.

'ಗೌನು ಕೊಟ್ಟಿದ್ದೀಯ?' ಕೇಳಿದೆ.

'ಕೊಟ್ಟಿದ್ದೀನಿ. ಒಬ್ಬನೇ ಪರೀಕ್ಷೆ ಮಾಡಲಿಕ್ಕೆ ಹೋಗಬೇಡ. ಮೊದಲು ಗ್ಯಾರಂಟಿ ಮಾಡಿಕೊ' ಎಂದ.

ನಾನು ರೂಮಿನೊಳಗೆ ಹೋದೆ. ಜಿಮ್ಮಿಗೆ ಹೋಗಿ ಹುರಿಗೊಂಡ ಮೈ. ತೋಳಿನ ಮೇಲೆ ನಗ್ನ ಹೆಣ್ಣಿನ ಹಚ್ಚೆಯಿದೆ. ಒಳ್ಳೆಯ ದೇಹಧಾರ್ಢ್ಯ. ಯಾವ ಕೋನದಲ್ಲಿಯೂ ಹೆಣ್ಣಿನಂತೆ ಕಾಣಲಿಲ್ಲ.

ಯಾರಿಗೆ ಗೊತ್ತು? ಕೆಲ ದಿನಗಳ ಹಿಂದೆ ನೋಡಿದ ನಿಕಿಟಾ ಬಟ್ಟೆ ತೆಗೆಯುವ ತನಕ ಹೆಣ್ಣೇ ಎಂದುಕೊಂಡಿದ್ದೆವು, ನಾವೆಲ್ಲ. ಅಳುಕುತ್ತಾ ಅಳುಕುತ್ತಾ, 'ಸಾರಿ ಬಾಬ್. ನಿನ್ನ ಲಿಂಗ ಆಸ್ಪತ್ರೆಯ ಕಂಪ್ಯೂಟರುಗಳಲ್ಲೆಲ್ಲ ಹೆಣ್ಣು ಎಂದೇ ದಾಖಲೆಯಾಗಿದೆ. ನಿನ್ನನ್ನು ಪರೀಕ್ಷಿಸಬೇಕಲ್ಲ. ನರ್ಸ್ ಸ್ಟೆಫನಿನ ಕರೆಯಲಾ?' ಎಂದು ಹಿಂಜರಿಕೊಳ್ಳುತ್ತಾ, ಹೆದರಿಕೊಳ್ಳುತ್ತಾ ಕೇಳಿದೆ.

'ಡ್ಯೂಡ್, ನಾನು ಗಂಡು. ವಾಟ್ ದ ಹೆಕ್ ಈಸ್ ರಾಂಗ್. ಇಟ್ ಈಸ್ ಅ ಮಿಸ್ಟೇಕ್. ಅದನ್ನು ಮೊದಲು ಸರಿಪಡಿಸಲು ಹೇಳು.'

'ಈಗಲೇ ಹೇಳುತ್ತೇನೆ' ಎಂದು ಮುಂದಿನ ಡೆಸ್ಕಿಗೆ ಹೋಗಿ 'ಮೊದಲು ನಿಮ್ಮ ತಪ್ಪನ್ನು ಸರಿಪಡಿಸಿಕೊಳ್ಳಿ. ಎಲ್ಲ ಕಡೆ ಬಾಬ್ ಥಾಂಸನ್‌ನ ಸೆಕ್ಸ್ ಗಂಡು ಎಂತಾಗಬೇಕು' ಎಂದು ಸ್ವಲ್ಪ ಒರಟಾಗಿಯೇ ಹೇಳಿದೆ.

ಒಂದು ಕಂಪ್ಯೂಟರ್ ಕ್ಲಿಕ್ಕಿನಿಂದ ಬಾಬ್ ಥಾಂಸನ್‌ನ ಮೆಡಿಕಲ್ ರೆಕಾರ್ಡುಗಳೆಲ್ಲ ಗುಲಾಬಿ ಬಣ್ಣದಿಂದ ನೀಲಿ ಬಣ್ಣಕ್ಕೆ ತಿರುಗುವುದನ್ನು ನಾನು ಏನೋ ದೊಡ್ಡ ಚಮತ್ಕಾರ ಎನ್ನುವಂತೆ ನೋಡುತ್ತಲೇ ಇದ್ದೆ.

## ಗುರುಪ್ರಸಾದ ಕಾಗಿನೆಲೆ

ಹುಟ್ಟಿದ್ದು ಶಿವಮೊಗ್ಗ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್ ಮತ್ತು ಎಂಡಿ ಪದವಿ. ಡೆಟ್ರಾಯ್ಟ್‌ನ ವೇಯ್ನ್ ಸ್ಟೇಟ್ ವಿಶ್ವವಿದ್ಯಾಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೊಟಾ ರಾಜ್ಯದ ರಾಚೆಸ್ಟರ್‌ನಲ್ಲಿ ವಾಸ. ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ಕೆಲಸ. 'ನಿರ್ಗುಣ' (ಕಥಾಸಂಕಲನ), 'ವೈದ್ಯ, ಮತ್ತೊಬ್ಬ' (ಲೇಖನ ಸಂಗ್ರಹ) 'ಗುಣ', 'ಹಿಜಾಬ್' (ಕಾದಂಬರಿಗಳು), 'ಆಚೀಚೆಯ ಕಥೆಗಳು' (ಸಂಪಾದಿತ ಕಥಾಸಂಕಲನ)– ಪ್ರಕಟಿತ ಕೃತಿಗಳು.